ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಅಭಿಯಂತರವರ ಕಛೇರಿ, ದಾಸರಹಳ್ಳಿ ವಲಯ,

ಎಂ.ಇ.ವಿ.ಬಡಾವಣೆ, ಬಾಗಲಗುಂಟೆ, ಹೆಸರಘಟ್ಟ ಮುಖ್ಯರಸ್ತೆ, ಬೆಂಗಳೂರು -560073.

ಸಂ:ಬಿಬಿಎಂಪಿ/ಮು.ಅ/ದಾವ/ತಾ.ಮ/ 21 /2017-18 ದಿನಾಂಕ: 19/04/2017

ತಾಂತ್ರಿಕ ಮಂಜೂರಾತಿ

ವಿಷಯ: "Improvements and Reasphalting road from HKR Chowtri to shiva Temple Road and 1st main Bhuvaneshwari Nagara in Dasarahalli Ward No 15" ಕಾಮಗಾರಿಯ ಅಂದಾಜು ಪಟ್ಟಿಗೆ ತಾಂತ್ರಿಕ ಮಂಜೂರಾತಿ ನೀಡುವ ಬಗ್ಗೆ.

ಉಲ್ಲೇಖ: ಜಂಟಿ ಆಯುಕ್ತರು (ದಾಸರಹಳ್ಳಿ ವಲಯ) ರವರ ಕಛೇರಿ ಅಡಳಿತಾತ್ಮಕ ಅನುಮೋದನೆ ಸಂಖ್ಯೆ: ಜಂ.ಆ/ದಾ.ವ/ಪಿಆರ್/ಆ.ಮ/96/2017-18, ದಿನಾಂಕ: 25/03/2017.

****

ಪ್ರಸ್ತಾವನೆ:-

ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ) ವಿಭಾಗ ರವರು ಮೇಲ್ಕಂಡ ಕಾಮಗಾರಿಯ ಅಂದಾಜು ಪಟ್ಟಿಯನ್ನು ರೂ. 30.00 ಲಕ್ಷ ಗಳ (ರೂಪಾಯಿ ಮೂವತ್ತು ಲಕ್ಷಗಳು ಮಾತ್ರ) ಮೊತ್ತಕ್ಕೆ ಅಂದಾಜು ಪಟ್ಟಿಯನ್ನು ತಯಾರಿಸಿ ಆಡಳಿತಾತ್ಮಕ ಅನುಮೋದನೆಯೊಂದಿಗೆ ತಾಂತ್ರಿಕ ಮಂಜೂರಾತಿ ಕೋರಿದ್ದು, ಉಲ್ಲೇಖಿತ ಪತ್ರದಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಪ್ರಸ್ತಾವನೆಯನ್ನು ಪರಿಗಣಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, "Improvements and Reasphalting road from HKR Chowtri to shiva Temple Road and 1st main Bhuvaneshwari Nagara in Dasarahalli Ward No 15" ಕಾಮಗಾರಿಯ ಅಂದಾಜು ಪಟ್ಟಿಯನ್ನು ರೂ. 30.00 ಲಕ್ಷಗಳ (ರೂಪಾಯಿ ಮೂವತ್ತು ಲಕ್ಷಗಳು ಮಾತ್ರ) ಮೊತ್ತಕ್ಕೆ ತಯಾರಿಸಿ ಸಲ್ಲಿಸಿದ್ದು, ಈ ಅಂದಾಜು ಪಟ್ಟಿಗೆ ಕೆಳಕಂಡ ತಾಂತ್ರಿಕ ನಿಬಂಧನೆಗಳಿಗೆ ಒಳಪಟ್ಟು ತಾಂತ್ರಿಕ ಮಂಜೂರಾತಿ ನೀಡಲಾಗಿದೆ. ಈ ತಾಂತ್ರಿಕ ಮಂಜೂರಾತಿ ಯನ್ನು ಮುಖ್ಯ ಅಭಿಯಂತರವರ ದಾಖಲುಪಟ್ಟಿ ಸಂಖ್ಯೆ- BBMP/CE/DZ/TS/ 21 /2017-18, ದಿನಾಂಕ: 19/04/2017 ರಲ್ಲಿ ನೊಂದಾಯಿಸಲಾಗಿದೆ.

ತಾಂತ್ರಿಕ ನಿಬಂಧನೆಗಳು:

1. ಅಂದಾಜಿನಲ್ಲಿ ಅಳವಡಿಸಿರುವ ಇಡಿಗಂಟು (Lumpsum) ರೂಪದಲ್ಲಿ ಒದಗಿಸಲಾದ ಮೊತ್ತಗಳಿಗೆ ವಿವರವಾದ ಅಂದಾಜುಗಳನ್ನು ಸಿದ್ದಪಡಿಸಿ, ಕೆಲಸ ಆರಂಭಿಸುವ ಮುನ್ನ ಸಕ್ಷಮ ಅಧಿಕಾರಿಗಳಿಂದ ಅನುಮೋದನೆ ಪಡೆಯತಕ್ಕದ್ದು.
2. ಕೆಲಸ ಪ್ರಾರಂಭಿಸುವ ಮುನ್ನ ಕಾಮಗಾರಿ ನಡೆಯುವ ಸ್ಥಳವು ವಿವಾದಗಳಿಂದ ಮುಕ್ತವಾಗಿದೆಯೆಂದು ಪರಿಶೀಲಿಸತಕ್ಕದ್ದು.

ಪು.ತಿ.ನೋ

Scanned by CamScanner

3. ರಸ್ತೆ ಕಾಮಗಾರಿಗೆ ಸಂಬಂಧಪಟ್ಟಂತೆ ರಸ್ತೆ ಇತಿಹಾಸ ವಹಿಯಲ್ಲಿ ದಾಖಲಿಸತಕ್ಕದ್ದು (Road History).
4. ಕಾಮಗಾರಿಗೆ ಮಂಜೂರಾದ ಮೊತ್ತದ ಹಣವನ್ನು ಅದೇ ಕಾಮಗಾರಿಗೆ ಉಪಯೋಗಿಸತಕ್ಕದ್ದು.
5. ಕಾಮಗಾರಿಯನ್ನು ಮೌಲ್ಯ ಪ್ರಮಾಣ ವಿವರಣೆಯ (Standard Specifications) ಪ್ರಕಾರ ನಿರ್ವಹಿಸತಕ್ಕದ್ದು.

ಮುಖ್ಯ ಅಭಿಯಂತರರು
ದಾಸರಹಳ್ಳಿ ವಲಯ

ಪ್ರತಿಯನ್ನು:-

1. ಅಧೀಕ್ಷಕ ಅಭಿಯಂತರರು, ದಾಸರಹಳ್ಳಿ ವಲಯ ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
2. ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ) ವಿಭಾಗ ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
3. ಸಹಾಯಕ ಹಣಕಾಸು ನಿಯಂತ್ರಕರು, ದಾಸರಹಳ್ಳಿ ವಲಯ ರವರ ಗಮನಕ್ಕೆ.
4. ಕಛೇರಿ ಕಡತಕ್ಕೆ.

Scanned by CamScanner